ನೀರನ್ನು ಪೂರೈಸುವುದಕ್ಕೊಸ್ಕರ ಒಪ್ಪಂದದ ಬಗ್ಗೆ

೭೧೯ (೯೨೪) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದಿಯ ವ್ಯವಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕೆ. ಜಿ. ಎಫ್.ಗೆ ಹೆಚ್ಚಿಗೆ ನೀರನ್ನು ಪೂರೈಸುವುದಕ್ಕೊಸ್ಕರ ಒಪ್ಪಂದಕ್ಕೆ ವಿರೋಧವಾಗಿ ಬೇತಮಂಗಲ ಕೆರೆಯ ಕೋಡಿಯನ್ನು ಏರಿಸಿರುವುದು ನಿಜವೆ ?

ಆ) ಕೋಡಿಯನ್ನು ಏರಿಸಿದ ಮೇಲೆ ರಾಮಸಾಗರ ಕೆರೆಗೆ ನೀರನ್ನು ಬಿಡದೆ, ಬೇಸಾಯಗಾರರಿಗೆ ಇದರಿಂದ ತೊಂದರೆಯಾಗಿರುವುದು ನಿಜವಲ್ಲವೇ ?

ಇ) ಈ ವೈಪರೀತ್ಯವನ್ನು ಸರಿಪಡಿಸಲು ಯಾವುದಾದರೂ ಪ್ರತಿಭಟನಾ ಪ್ರದರ್ಶನ ಇದೆಯೆ ?

ಈ) ಬೇಸಾಯಗಾರರಿಗೆ ಸಹಾಯ ಮಾಡಲು ತೆಗೆದುಕೊಂಡ ಕ್ರಮಗಳೇನು ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಇಲ್ಲ

ಇ) ರಾಮಸಾಗರ ಕೆರೆಯಿಂದ ಅನುಕೂಲ ಪಡೆವ ಬೇಸಾಯಗಾರರಿಂದ ಬೇತಮಂಗಲ ಕೆರೆಯಲ್ಲಿ ೨೫೫೨.೦೦ ಅಡಿಗಳ ಮಟ್ಟಕ್ಕಿಂತ ಹೆಚ್ಚಿಗೆ ನೀರನ್ನು ಸಂಗ್ರಹ ಮಾಡಬಾರದೆಂಬ ಬೇಡಿಕೆಯಿದೆ.

ಈ) ಉದ್ಭವಿಸುವುದಿಲ್ಲ.

ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯ ಬಗ್ಗೆ

೭೨೦ (೧೦೮೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿರುವ ಕೆಲಸಗಾರರ ಸಂಖ್ಯೆ ?

ಆ) ಕಾರ್ಖಾನೆ ಲೇ ಆಫ್ ಘೋಷಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ಕಾರ್ಖಾನೆ ಪರಿಹಾರವೇನಾದರೂ ಕೊಡುತ್ತಿದೆಯೇ ?

ಈ) ಕಾರ್ಮಿಕರ ಹಿತರಕ್ಷಣೆಗೆ ಕೈಗೊಳ್ಳಲಾಗಿರುವ ಕ್ರಮ ?

ಉ) ಲೇ ಆಫ್‌ನ್ನು ತೆರವು ಮಾಡಿಸಲು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ಸುಮಾರು ೬೦೦ ಕೆಲಸಗಾರರು.

ಆ) ಹೌದು, ಲೇ ಆಫ್‌ನ್ನು ದಿನಾಂಕ: ೧೬-೪-೧೯೮೫ ರಿಂದ ಘೋಷಿಸಲಾಗಿದೆ.

ಇ) ಇಲ್ಲ. ವ್ಯವಸ್ಥಾಪಕರು ತಮ್ಮ ಸಂಸ್ಥೆಯು ಋತುಕಾಲಿಕವಾದ ಕಾರಣ ಕೈಗಾರಿಕಾ ವಿವಾದಗಳ ಅಧಿನಿಯಮಗಳ ಕೆಳಗೆ ಲೇ ಆಫ್ ಕುರಿತಾದ ಉಪಬಂಧ, ತಮ್ಮ ಸಂಸ್ಥೆಗೆ ಅನ್ವಯಿಸುವುದಿಲ್ಲವೆಂದು ವಾದ ಹೂಡಿದೆ.